ಹೋರಾಟ ಮಾಡುತ್ತಿದ್ದಾರೆ. ಏಕೆಂದರೆ, ಮೇಲೆ ತಿಳಿಸಿದ ಎರಡೂ ಇಲಾಖೆಗಳು ಸರ್ಕಾರದ ಅಧೀನದಲ್ಲಿ ಬರುತ್ತದೆಂದು ನಾನು ತಿಳಿದಿದ್ದೇನೆ. ಗ್ರಾಮ ಪಂಚಾಯಿತಿಯಾಗಲಿ ಅಥವಾ ಪೌರಾಡಳಿತ ಇಲಾಖೆಯಾಗಲಿ ಏನಾದರೂ ಮಾಡಿ ಗುಬ್ಬಿ ಪಟ್ಟಣಕ್ಕೆ ತಕ್ಷಣ ಕುಡಿಯುವ ನೀರು ಒದಗಿಸುವುದಕ್ಕೆ ಈಗಾಗಲೇ ಯಾವ ಯೋಜನೆ ಆರಂಭವಾಗಿದೆ, ಅದನ್ನು ಮುಂದುವರೆಸುತ್ತೀರಾ? ಎಷ್ಟು ದಿವಸಗಳಲ್ಲಿ ಅದನ್ನು ಪೂರ್ಣಗೊಳಿಸುತ್ತೀರಿ? ಅಲ್ಲಿ ಹೇಮಾವತಿ ನದಿ ಹರಿಯುತ್ತಿದ್ದರೂ ಅಲ್ಲಿರುವ ಜನರಿಗೆ ಕುಡಿಯಲು ನೀರಿಲ್ಲ. ನಮ್ಮ ಜಿಲ್ಲೆಯಲ್ಲೂ ಇದು ವ್ಯಾಪಕವಾದ ಸಮಸ್ಯೆಯಾಗಿದೆ. ಆದುದರಿಂದ, ಗುಬ್ಬಿ ಪಟ್ಟಣದಲ್ಲಿ ಈ ಹಿಂದೆ ಕುಡಿಯುವ ನೀರಿನ ಯಾವ ಯೋಜನೆಯನ್ನು ಕೈಗೊಳ್ಳಲಾಗಿತ್ತೋ ಅದನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮುಂದುವರೆಸಿ ಸದರಿ ಪಟ್ಟಣಕ್ಕೆ ಕುಡಿಯುವ ನೀರು ಕೊಡುವ ಬಗ್ಗೆ ಆಲೋಚನೆ ಮಾಡುತ್ತೀರಾ? ಎಂಬುದಕ್ಕೆ ತಮ್ಮಿಂದ ಉತ್ತರ ಕೇಳಬಯಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಮೊದಲು ಗುಬ್ಬಿ ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಯಾಗುವುದಕ್ಕಿಂತ ಮುಂಚೆ ಗ್ರಾಮ ಪಂಚಾಯಿತಿಯಾಗಿತ್ತು. ಅದು ಗ್ರಾಮ ಪಂಚಾಯಿತಿಯಾಗಿದ್ದಂಥ ಸಂದರ್ಭದಲ್ಲಿ ಅಲ್ಲಿಗೆ ಸುಮಾರು 18 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಮಂಜೂರು ಮಾಡಿದೆವು. ಅನಂತರ, ಅದು ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಯಾದ ನಂತರ ನಮ್ಮ ಇಲಾಖೆಯ ಹೊರತಾಗಿ ಅದು ಪೌರಾಡಳಿತ ಇಲಾಖೆಗೆ ಹೋಗುತ್ತದೆ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿರುವುದು ಸಹಜ. ಈ ಕುರಿತು ಮಾನ್ಯ ಪೌರಾಡಳಿತ ಸಚಿವರೊಂದಿಗೆ ಮಾತನಾಡಬೇಕೆಂದು ಮಾನ್ಯ ಸದಸ್ಯರಾದ ಶಿವನಂಜನಪ್ಪನವರಿಗೆ ಎರಡು ದಿವಸಗಳ ಹಿಂದೆ ನಾನು ತಿಳಿಸಿದ್ದೆ. ಅವರು ಬಂದ ತಕ್ಷಣ ಪೌರಾಡಳಿತ ಇಲಾಖೆಯಿಂದ ಹಣ ಮಂಜೂರು ಮಾಡಿಸಿ ಸದರಿ ಕಾಮಗಾರಿಯನ್ನು ಮುಂದುವರೆಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

**(4) ಸುಮಾರು 33 ಕೋಟಿ ರೂಪಾಯಿ ಬೆಲೆಯ ಹೆಲಿಕ್ಯಾಪ್ಟರ್‌ನ್ನು ಕೊಂಡುಕೊಳ್ಳುವ ಸರ್ಕಾರದ ತೀರ್ಮಾನ ಕುರಿತು.**

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಕೆಲವು ದಿವಸಗಳ ಹಿಂದೆ ಈಗಾಗಲೇ ಪ್ರಕಟವಾಗಿರತಕ್ಕದ್ದು. ಸುಮಾರು 22 ಕೋಟಿ ಬೆಲೆಯ ಹೊಸ ಹೆಲಿಕ್ಯಾಪ್ಟರ್‌ನ್ನು ಕೊಂಡುಕೊಳ್ಳುವ ಬಗ್ಗೆ ಸರ್ಕಾರದಲ್ಲಿ ತೀರ್ಮಾನವಾಗಿ ಈಗಾಗಲೇ ಮೆಮೊರ್ಯಾಂಡಂ ಆಫ್ ಅಗ್ರಿಮೆಂಟ್‌ಗೆ ಸಹ ಸಹಿಯಾಗಿರುವ ಬಗ್ಗೆ ವರದಿಯಾಗಿದೆ. ನಮ್ಮಲ್ಲಿ ಈಗಾಗಲೇ ಒಂದು ಹೆಲಿಕ್ಯಾಪ್ಟರ್ ಇದೆ. ಅದು

ಹೆಚ್.ಎ.ಎಲ್.ನವರಿಂದ ಸ್ಥಳೀಯವಾಗಿ ನಿರ್ಮಾಣಗೊಂಡಿದ್ದರೂ ಅದು ಹಳೆಯದಾಗಿದೆ ಎನ್ನತಕ್ಕ ಕಾರಣದಿಂದ ಅದನ್ನು ಮಾರಾಟ ಮಾಡಿ ಹೊಸದಾದುದನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಹೊರಟಿರುವ ಸಂದರ್ಭದಲ್ಲಿ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯನ್ನು ಗಮನಿಸಬೇಕಾಗುತ್ತದೆ. ಗುತ್ತಿಗೆದಾರರಿಗೆ ಹಣವನ್ನು ಕೊಡಲಾಗದ ಸ್ಥಿತಿಯಲ್ಲಿ ನಮ್ಮ ರಾಜ್ಯ ಹಣಕಾಸಿನ ಸ್ಥಿತಿ ಇದೆ. ಹೊಟ್ಟಿಗೆ ಹಿಟ್ಟು ಇಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಎಂಬ ರೀತಿಯಲ್ಲಿ ಹೆಲಿಕ್ಯಾಪ್ಟರ್‌ನ್ನು ಈ ಸ್ಥಿತಿಯಲ್ಲಿ ತೆಗೆದುಕೊಳ್ಳುತ್ತೀರೆಂದರೆ ಇದರಲ್ಲಿ ಅರ್ಥವಿದೆಯೇ? ಅತ್ಯಂತ ಜರೂರಾಗಿ ಎಲ್ಲಿಗಾದರೂ ಮುಖ್ಯಮಂತ್ರಿಯವರು ಹೋಗಬೇಕಾದ ಸಂದರ್ಭ ಬಂದಾಗ ಮಾತ್ರ ಹೆಲಿಕ್ಯಾಪ್ಟರ್‌ನ ಅವಶ್ಯಕತೆ ಇರುತ್ತದೆ. ಇವತ್ತು ಬಾಡಿಗೆಗೆ ಹೆಲಿಕ್ಯಾಪ್ಟರ್ ದೊರೆಯುತ್ತವೆ. ಚಾರ್ಟರ್ಡ್ ಫ್ಲೈಟ್ಸ್ ಬಾಡಿಗೆಗೆ ದೊರೆಯುತ್ತವೆ. ಅದನ್ನು ತಾವು ಉಪಯೋಗ ಮಾಡಿಕೊಳ್ಳುತ್ತಲೂ ಇದ್ದೀರಿ. ರಾಜ್ಯದ ಆರ್ಥಿಕ ಸ್ಥಿತಿ ಸರಿಯಾಗಿಲ್ಲದ ಸಮಯದಲ್ಲಿ ಹೊಸ ಹೆಲಿಕ್ಯಾಪ್ಟರ್‌ನ್ನು ತೆಗೆದುಕೊಳ್ಳುವ ಅವಶ್ಯಕತೆಯೇನಾದರೂ ಇದೆಯೇ? ಸ್ಥಳೀಯವಾಗಿ ಹೆಚ್.ಎ.ಎಲ್.ನವರು ಹೆಲಿಕ್ಯಾಪ್ಟರ್‌ನ್ನು ನಿರ್ಮಾಣ ಮಾಡುತ್ತಾರೆ. ಮೊನ್ನೆ ನಡೆದಂಥ ಏರ್ ಶೋ ನಲ್ಲಿ ಸಹ ಹೆಚ್.ಎ.ಎಲ್.ನವರು ನಿರ್ಮಾಣ ಮಾಡಿರುವಂಥ ಎಂಟು ಹತ್ತು ಸೀಟುಗಳುಳ್ಳ ಹೆಲಿಕ್ಯಾಪ್ಟರ್‌ನ್ನು ನಾವು ನೋಡಿದ್ದೇವೆ. ಸ್ಥಳೀಯವಾಗಿ ನಿರ್ಮಾಣವಾಗುವ ಇಂಥದ್ದನ್ನೇ ಕೊಂಡುಕೊಳ್ಳದೆ ವಿದೇಶದಲ್ಲಿ ನಿರ್ಮಾಣವಾಗುವುದನ್ನು ಕೊಂಡುಕೊಳ್ಳುತ್ತೇವೆಂದರೆ ನಾನು ಏನು ಹೇಳಬೇಕು? ಅಮೇರಿಕಾ, ಫ್ರಾನ್ಸ್ ಮುಂತಾದ ಇತರೆ ವಿದೇಶಗಳಲ್ಲಿ ಹೆಲಿಕ್ಯಾಪ್ಟರ್‌ಗಳನ್ನು ಉತ್ಪಾದನೆ ಮಾಡುತ್ತಾರೆ, ಅವುಗಳನ್ನು ಕೊಂಡುಕೊಂಡರೆ ಆಕರ್ಷಕವಾದ ಕಮೀಷನ್ ಕೊಡುವ ಮಟ್ಟಕ್ಕೆ ವಿದೇಶಗಳ ಹೆಲಿಕ್ಯಾಪ್ಟರ್ ಉತ್ಪಾದಕ ಕಂಪನಿಗಳು ಬರುತ್ತಿವೆ. ಆ ಕಮೀಷನ್ ಆಸೆಗಾಗಿ ಇವರು ಬಲಿಯಾದರೆ ಎಂಬ ಭಯ ನನಗೆ ಮೂಡಿದೆ. ಆದ್ದರಿಂದ ನಿವೇನು ಹೊಸ ಹೆಲಿಕ್ಯಾಪ್ಟರ್ ಕೊಂಡುಕೊಳ್ಳಲು ತೀರ್ಮಾನ ಮಾಡಿದ್ದೀರಿ ಅದನ್ನು ದಯಮಾಡಿ ಕೈಬಿಡಬೇಕೆಂದು ವಿನಂತಿಸಿಕೊಳ್ಳುತ್ತೇವೆ. ತಾವೇನು ಈಗಾಗಲೇ ಮೆಮೊರ್ಯಾಂಡಂ ಆಫ್ ಅಗ್ರಿಮೆಂಟ್‌ಗೆ ಸಹಿ ಮಾಡಿದ್ದೀರಿ ಅದನ್ನು ದಯಮಾಡಿ ಹಾನರ್ ಮಾಡಬೇಡಿ. ತಾವು ಹೊಸ ಹೆಲಿಕ್ಯಾಪ್ಟರ್‌ನ್ನು ತೆಗೆದುಕೊಳ್ಳಲೇ ಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡುವುದಾಗಿದ್ದರೆ ಸ್ಥಳೀಯವಾಗಿ ಉತ್ಪಾದನೆಯಾಗುವ ಹೆಚ್.ಎ.ಎಲ್.ನ ಹೆಲಿಕ್ಯಾಪ್ಟರನ್ನೇ ತೆಗೆದುಕೊಳ್ಳಲು ಮುಂದಾಗಬೇಕು. ಇಲ್ಲದಿದ್ದರೆ ಇದರ ಬಗ್ಗೆ ಅನೇಕ ರೀತಿಯ ಅನುಮಾನ ಬರುತ್ತದೆ. ಅದಕ್ಕೆ ತಾವು ಆಸ್ಪದ ಮಾಡಿಕೊಡದಂತೆ ಮಾಡಬೇಕು. ಏಕೆಂದರೆ ನಾಳೆ ದಿವಸ ಹೆಲಿಕ್ಯಾಪ್ಟರ್‌ನ ಸರ್ವೀಸ್ ಇರಬಹುದು, ರಿಪೇರಿ ಮಾಡುವುದಿರಬಹುದು, ಇನ್ನಾವುದೇ ತೊಂದರೆ ಬಂದರೂ ಸ್ಥಳೀಯವಾಗಿ ಉತ್ಪಾದನೆಯಾಗುವ ಹೆಲಿಕ್ಯಾಪ್ಟರನ್ನು ತೆಗೆದುಕೊಳ್ಳದೆ ಫ್ರೆಂಚ್‌ನವರದನ್ನು ಏಕೆ ತೆಗೆದುಕೊಳ್ಳಲು ಮುಂದಾಗುತ್ತೀರಿ? ತಾವು ಬೆಂಗಳೂರಿನಿಂದ ಬೀದರ್‌ಗೆ

ಹೋಗಬೇಕಾದರೆ ಮಧ್ಯದಲ್ಲಿ ಇಳಿದು ಫ್ಯೂಯಲ್‌ನ್ನು ತುಂಬಿಸಿಕೊಳ್ಳಬೇಕಾಗುತ್ತದೆ ಎಂಬ ಒಂದೇ ಕಾರಣ ಹೇಳಬಹುದು. ಆ ರೀತಿ ಮಾಡುವಲ್ಲಿ ತೊಂದರೆಯೇನಾಗುತ್ತದೆ? ತಾವು ವರ್ಷಕ್ಕೆ ಎಲ್ಲೋ ಕೆಲವೇ ಸಲ ಅಂಥ ದೂರದ ಸ್ಥಳಗಳಿಗೆ ಹೋಗಬೇಕಾಗಿ ಬರಬಹುದು. ಆದ್ದರಿಂದ ತಮ್ಮ ಈ ಉದ್ದೇಶವನ್ನು ಮುಂದೂಡುವುದು ಒಳ್ಳೆಯದು. ತಮಗೆ ಬಾಡಿಗೆಗೆ ಅವುಗಳು ಸಿಗುತ್ತವೆ. ಜಕ್ಕೂರಿನಲ್ಲಿ ನಮ್ಮ ಫ್ಲೈಯಿಂಗ್ ಸ್ಕೂಲ್ ಒಂದಿದೆ. ನಮ್ಮ ಮತ್ತು ಹೊರ ರಾಜ್ಯದ ಅನೇಕ ಮಕ್ಕಳು ಅಲ್ಲಿ ಸೇರಿದ್ದಾರೆ. ಒಂದು ವರ್ಷವಾದರೂ ಆ ಮಕ್ಕಳು ಫ್ಲೈಟ್‌ನ್ನು ಹತ್ತಲಿಲ್ಲ, ನೋಡಲಿಲ್ಲ. ಅಲ್ಲಿರತಕ್ಕ ಫ್ಲೈಟ್ ಕೆಟ್ಟು ಹೋಗಿದೆ. ಇಂಥ ಸಂದರ್ಭದಲ್ಲಿ ಆ ಶಾಲೆಗೆ ಆಧ್ಯತೆಯನ್ನು ಕೊಟ್ಟು ತಾವು ಬಾಡಿಗೆಗೆ ತೆಗೆದುಕೊಂಡು ಉಪಯೋಗ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು. ಆ ರೀತಿ ಮಾಡಿದ್ದರೆ ಆ ಫ್ಲೈಯಿಂಗ್ ಶಾಲೆಗೂ ಮತ್ತು ತಮಗೂ ಅನುಕೂಲವಾಗುತ್ತಿತ್ತು.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ಉಪನಾಯಕರೆ ತಾವು ಅವರಿಗೆ ಎಂದು ಹೇಳಬೇಡಿ, ಯಾರು ಅಧಿಕಾರಕ್ಕೆ ಬರುತ್ತಾರೋ ಅವರಿಗೆ ಉಪಯೋಗವಾಗುತ್ತದೆ. ದೇವರಾಜ್ ಅರಸರು ರಾಜ್ಯದಲ್ಲಿ ಮೊದಲ ಬಾರಿಗೆ ಹೆಲಿಕ್ಯಾಪ್ಟರ್‌ನ್ನು ತೆಗೆದುಕೊಂಡಾಗ ಅವರನ್ನು ಬೈಯದವರಿರಲಿಲ್ಲ. ಆದರೆ ಅವರು ಅದನ್ನು ಉಪಯೋಗ ಮಾಡಿದ್ದು ಕೆಲವೇ ತಿಂಗಳುಗಳು. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ಇದನ್ನು ಮಾಡುತ್ತಿರಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಜಯಚಂದ್ರರವರು ಈ ವಿಚಾರವನ್ನು ಪ್ರಸ್ತಾಪ ಮಾಡಿರುವ ಉದ್ದೇಶವೇನೆಂದರೆ, ಸ್ಥಳೀಯವಾಗಿ ಹೆಚ್.ಎ.ಎಲ್.ನವರು ಉತ್ಪಾದನೆ ಮಾಡುತ್ತಿರುವ ಹೆಲಿಕ್ಯಾಪ್ಟರ್‌ಗಳನ್ನು ಬೇರೆಯವರು ಕೊಂಡುಕೊಂಡಿದ್ದಾರೆ. ಅದನ್ನೇ ಕೊಂಡುಕೊಳ್ಳಬಹುದಲ್ಲವೆಂದು ಅವರು ಹೇಳಿದ್ದಾರೆ. ಹೆಲಿಕ್ಯಾಪ್ಟರನ್ನೇ ಕೊಂಡುಕೊಳ್ಳಬೇಡಿ ಎಂದು ಹೇಳಿಲ್ಲ. ಕೊಂಡುಕೊಳ್ಳಲಿ, ಮುಂದೆ ಅದು ನಮಗೆ ಉಪಯೋಗಕ್ಕೆ ಬರುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, 22 ಕೋಟಿ ರೂಪಾಯಿಗಳ ಹೆಲಿಕ್ಯಾಪ್ಟರನ್ನು ಕೊಂಡುಕೊಳ್ಳಬೇಕಾದರೆ ಅದಕ್ಕೆ ಟೆಂಡರ್‌ನ್ನು ಕರೆದಿದ್ದೀರಾ? ಯಾವ್ಯಾವ ಕಂಪನಿಗಳ ಜೊತೆ ಸಮಾಲೋಚನೆ ಮಾಡಿದ್ದೀರಿ?

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ ತಾವು ಶೂನ್ಯವೇಳೆಯಲ್ಲಿ ಇಷ್ಟೊಂದು ವಿವರವಾಗಿ ಮಾತನಾಡುವುದು ಸರಿಯಲ್ಲ. ತಾವು ದಯಮಾಡಿ ಮುಗಿಸಿ. ಇಲ್ಲದಿದ್ದರೆ ಸದನವನ್ನು ಕಡೆಗಣಿಸಿದಂತಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ಸ್ಥಳೀಯವಾಗಿ ಉತ್ಪಾದನೆ ಮಾಡುವ ಹೆಚ್.ಎ.ಎಲ್.

ಕಾರ್ಖಾನೆ ಇರುವಾಗ ಯಾವುದೋ ಫ್ರೆಂಚ್ ಕಂಪನಿಯಿಂದ ತೆಗೆದುಕೊಂಡರೆ ನಮ್ಮ ಕೈಗಾರಿಕೆಗಳ ಬಗ್ಗೆ ಯಾವ ಭಾವನೆ ಬರುತ್ತದೆ ಯೋಚನೆ ಮಾಡಬೇಕು? ಮತ್ತು ಟೆಂಡರ್‌ಗಳನ್ನು ಏಕೆ ಕರೆದಿಲ್ಲ ಎಂಬ ಬಗ್ಗೆ ವಿವರಣೆ ನೀಡಬೇಕು.

+ ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೇ, ರಾಜ್ಯದ ಆಡಳಿತ ಹಿತದೃಷ್ಟಿಯಿಂದ, ಅತಿ ಗಣ್ಯ ವ್ಯಕ್ತಿಗಳು, ರಾಜಧಾನಿಯಿಂದ ಹೊರಗಡೆ ಹಾಗೂ ಒಂದು ಜಿಲ್ಲಾ ಕೇಂದ್ರದಿಂದ ಮತ್ತೊಂದು ಜಿಲ್ಲಾ ಕೇಂದ್ರಕ್ಕೆ ಹಾಗೂ ರಾಜ್ಯದ ಮೂಲೆಗಳಿಗೆ ತುರ್ತಾಗಿ ಹೋಗಬೇಕಾದ ಅವಶ್ಯಕತೆಯು ಉದ್ಭವಿಸಿದಲ್ಲಿ ಶೀಘ್ರ ಸಾರಿಗೆ ವ್ಯವಸ್ಥೆ ಅವಶ್ಯವಾಗಿರುತ್ತದೆ. ಇದು ಅಲ್ಲದೇ, ಸರ್ಕಾರದ ಕಾರ್ಯಕಾರಿ ಅಧಿಕಾರಿಗಳ ಕಾರ್ಯಭಾರ ಹೆಚ್ಚಿದ್ದು ತುರ್ತು ಪರಿಸ್ಥಿತಿಗಳಲ್ಲಿ ಶೀಘ್ರ ಸಾರಿಗೆ ಅತಿ ಮಹತ್ವದ್ದಾಗಿರುತ್ತದೆ. ಈ ದಿಸೆಯಲ್ಲಿ 1979 ರಿಂದಲೂ ಹಾಲಿ ಇರುವ ಹೆಲಿಕ್ಯಾಪ್ಟರ್‌ನ ಉಪಯೋಗವನ್ನು ಮಾನ್ಯ ಮುಖ್ಯಮಂತ್ರಿಯವರು ಅಲ್ಲದೇ ಸಚಿವ ಸಂಪುಟದ ಸಹಪಾಠಿಗಳೂ ಸಹ ರಾಜ್ಯದ ಹಿತದೃಷ್ಟಿಯಿಂದ ಪಡೆಯುತ್ತಿದ್ದಾರೆ. ರಾಜ್ಯ ಸರ್ಕಾರದ ಪ್ರಸ್ತುತ ಚೇತಕ್ ಹೆಲಿಕ್ಯಾಪ್ಟರ್, ಒಂದೇ ಎಂಜಿನ್ ಹೊಂದಿದ್ದು ಸಾಕಷ್ಟು ಹಳೆಯದಾಗಿದ್ದು, ವಾರ್ಷಿಕ ತಪಾಸಣೆ ಮತ್ತು ದುರಸ್ತಿಗಾಗಿ ನಿಲ್ಲಿಸಿದಾಗ, ನಿಗದಿತ ವೇಳೆಯಲ್ಲಿ ನಿರ್ವಹಿಸಬೇಕಾದ ಕರ್ತವ್ಯಕ್ಕೆ ತೊಂದರೆಯುಂಟಾಗುತ್ತದೆ. ಮತ್ತು ಈ ಹೆಲಿಕ್ಯಾಪ್ಟರ್‌ನಲ್ಲಿ ನಾಲ್ಕು ಜನ ಪ್ರಯಾಣಿಕರಿಗೆ ಮಾತ್ರ ಸ್ಥಳಾವಕಾಶವಿದೆ. ಎರಡು ಇಂಜಿನ್ ಇರುವ ಹೆಲಿಕ್ಯಾಪ್ಟರ್‌ನಲ್ಲಿ ಪ್ರಯಾಣ ಸುರಕ್ಷತೆ, ಒಂದು ಮೂಲೆಯಿಂದ ರಾಜ್ಯದ ಮತ್ತೊಂದು ಮೂಲೆಗೆ ನಿಲ್ಲದೆ ಕ್ರಮಿಸುವಿಕೆ, ಹೆಚ್ಚಿನ ವೇಗ, ಹೆಚ್ಚು ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯ ಇರುವ ದೃಷ್ಟಿಯಲ್ಲಿ ರಾಜ್ಯದಲ್ಲಿ ಈಗ ಇರುವ ಒಂದು ಹೆಲಿಕ್ಯಾಪ್ಟರ್‌ನ ಜೊತೆಗೆ ಹೊಸದಾದ ಇನ್ನೊಂದು ಎರಡು ಇಂಜಿನ್ ಹೆಲಿಕ್ಯಾಪ್ಟರ್‌ನ್ನು ಹೊಂದುವುದು ಅತ್ಯಾವಶ್ಯಕವಾಗಿರುತ್ತದೆ. ಈ ದಿಸೆಯಲ್ಲಿ ಫ್ರೆಂಚ್ ಹಾಗೂ ಅಮೇರಿಕಾ ದೇಶದವರು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿರುವ ಎರಡು ಇಂಜಿನ್ ಹೆಲಿಕ್ಯಾಪ್ಟರ್‌ಗಳಲ್ಲಿ ಒಂದನ್ನು ಆಯ್ದುಕೊಳ್ಳುವ ಬಗ್ಗೆ ಉನ್ನತ ಮಟ್ಟದಲ್ಲಿ ಪರಿಶೀಲಿಸಿದ ನಂತರ, ಈ ಬಗ್ಗೆ ತಾಂತ್ರಿಕ ಅಭಿಪ್ರಾಯವನ್ನು ಪಡೆಯಲು ಹೆಲಿಕ್ಯಾಪ್ಟರ್ ಬಗ್ಗೆ ಅನುಭವವಿರುವ ತಜ್ಞರ ಸಮಿತಿಯೊಂದನ್ನು ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯುಡಿ 17 ಪಿಸಿಎ 96 ದಿನಾಂಕ: 12-5-1997ರಲ್ಲಿ ರಚಿಸಲಾಯಿತು. ಸಮಿತಿಯು ಫ್ರೆಂಚ್ ದೇಶದ ಎ.ಎಸ್.365 ಎನ್ 2, ಎಎಸ್ 365 ಎನ್3 ಹಾಗೂ ಅಮೇರಿಕಾ ಬೆಲೆ 430 ಹೆಲಿಕ್ಯಾಪ್ಟರ್‌ಗಳ ಮಾಹಿತಿಗಳನ್ನು ಸುದೀರ್ಘವಾಗಿ ಪರಿಶೀಲಿಸಿದ ನಂತರ ದಿನಾಂಕ: 25-06-1997ರ ಸಭೆಯಲ್ಲಿ ಅಂತಿಮ ಶಿಫಾರಸ್ಸನ್ನು ಮಾಡಲಾಗಿದ್ದು ಫ್ರೆಂಚ್ ದೇಶದ ಹೆಲಿಕ್ಯಾಪ್ಟರ್ ಚಾಲನಾ ವೆಚ್ಚವು ಗಂಟೆಗೆ 24,023 ರೂಪಾಯಿಗಳು ಆಗಲಿದ್ದು, ಅಮೇರಿಕಾ ದೇಶದ ಬೆಲೆ 430ರ ಚಾಲನಾ ವೆಚ್ಚ ಗಂಟೆಗೆ 19,088 ರೂಪಾಯಿಗಳಾಗುತ್ತದೆ. ಇದರಂತೆ 25 ವರ್ಷಗಳಲ್ಲಿ ಬೆಲೆ ಹೆಲಿಕ್ಯಾಪ್ಟರ್ ನಿರ್ವಹಣಾ

ವೆಚ್ಚವು ಗಂಟೆಗೆ ಶೇಕಡ 21ರಷ್ಟು ಕಡಿಮೆ ಆಗಲಿರುತ್ತದೆ. ಒಂದೇ ತರಹದ ಪರಿಸ್ಥಿತಿಯಲ್ಲಿ ಬೆಂಗಳೂರಿನಿಂದ ಬೀದರ್‌ರವರೆಗೆ ಪ್ರಯಾಣಿಸಲು ಫ್ರೆಂಚ್ ಹೆಲಿಕ್ಯಾಪ್ಟರ್ ಎ.ಎಸ್.365 ಎನ್ 3, ಎಂಟು ಪ್ರಯಾಣಿಕರನ್ನು ಮತ್ತು ಅಮೇರಿಕಾ ಬೆಲೆ 430, ನಾಲ್ಕು ಪ್ರಯಾಣಿಕರನ್ನು ಕೊಂಡೊಯ್ಯುತ್ತದೆ. ಸಮಿತಿಯ ಶಿಫಾರಸ್ಸನ್ನು ಗಣನೆಗೆ ತೆಗೆದುಕೊಂಡು, ಈಗಾಗಲೇ ಲಭ್ಯವಿರುವ ಫ್ರೆಂಚ್ ದೇಶದ ಎ.ಎಸ್.365 ಎನ್ 3, ಹೆಲಿಕ್ಯಾಪ್ಟರ್ ಅನ್ನು ಕೊಂಡುಕೊಳ್ಳಬಹುದು ಎಂದು ಅಭಿಪ್ರಾಯಪಡಲಾಗಿದೆ. ಈ ಹೆಲಿಕ್ಯಾಪ್ಟರ್ ಖರೀದಿಗೆ 33 ಮಿಲಿಯನ್ ಫ್ರೆಂಚ್ ಫ್ರಾಂಕ್ಸ್ (ಅಂದರೆ ಚಾಲ್ತಿ ಇರುವ ಫ್ರೆಂಚ್ ಫ್ರಾಂಕ್‌ಗೆ 6.20 ರೂಪಾಯಿನಂತೆ ವಿದೇಶಿ ವಿನಿಮಯ ದರದಂತೆ 20.46 ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆ) ಹಾಗೂ ಇದರಲ್ಲಿ 800 ಗಂಟೆಗೆ ಬಿಡಿಭಾಗಗಳು ಮತ್ತು ಟೂಲ್ಸ್ ಕಿಟ್‌ಗಳ ವೆಚ್ಚವು ಸೇರಿರುತ್ತದೆ. ಹೆಲಿಕ್ಯಾಪ್ಟರ್ ಕೊಳ್ಳಲು 1997-98 ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ತಜ್ಞರ ಸಮಿತಿಯ ಶಿಫಾರಸ್ಸನ್ನು ಆಧರಿಸಿ ಕೊಳ್ಳಬಹುದಾದ ಹೆಲಿಕ್ಯಾಪ್ಟರ್ ನಮೂನೆಯನ್ನು ನಿರ್ಧರಿಸಿ ತಯಾರಿಕೆಗೆ ಸಂಧಾನ ಪತ್ರವನ್ನು ಕಳುಹಿಸಿದ ನಂತರ ಹೆಲಿಕಾಪ್ಟರ್ ವೆಚ್ಚವನ್ನು ಆರ್ಥಿಕ ಸಂಸ್ಥೆಗಳಿಂದ ಪಡೆಯುವ ಬಗ್ಗೆ ಪ್ರತ್ಯೇಕವಾಗಿ ಪರಿಶೀಲಿಸಬಹುದಾಗಿದೆ. ಈಗಾಗಲೇ ಇದಕ್ಕೆ ಅಗ್ರಿಮೆಂಟ್ 21-4-98ರಲ್ಲಿ ಆಗಿದೆ. ಇದಕ್ಕಾಗಿ ತಜ್ಞರ ಸಮಿತಿಯನ್ನು ಮಾಡಬೇಕಾದಾಗ ಅದರಲ್ಲಿ ವಿಶೇಷ ಅನುಭವವಿರುವಂಥವರನ್ನೇ ಗಣನೆಯಲ್ಲಿ ತೆಗೆದುಕೊಂಡು ಅಲ್ಲಿ ಒಂದು ಸಮಿತಿಯನ್ನು ಮಾಡಲಾಗಿದೆ. ಅದರಲ್ಲಿ ವಿಂಗ್ ಕಮ್ಯಾಂಡರ್ ಐ.ಎಂ.ಥೋಪ್ರಾ ರಿಟೈರ್ಡ್ ಫಾರ್ಮರ್ ಛೇರ್ಮನ್ ಹೆಚ್.ಎ.ಎಲ್. ಹಾಗೂ ಏರ್ ಮಾರ್ಷಲ್ ಪಿ.ರಾಜಕುಮಾರ್, ಎ.ವಿ.ಎಸ್.ಎಂ, ಪಿ.ಎಂ.ಪ್ರೋಗ್ರಾಮ್ ಡೈರೆಕ್ಟರ್ ಫ್ಲೈಟ್ ಟೆಸ್ಟ್ ಏರೊನ್ಯಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ, ಮತ್ತೊಬ್ಬರು ಏರ್ ಕಮಾಂಡರ್ ಕೆ.ಬದರಿನಾರಾಯಣ್ ವಿ.ಎಸ್.ಎಂ.ರಿಟೈರ್ಡ್, ಫಾರ್ಮರ್ ಕಮಾಂಡರ್, ಎ.ಎಫ್.ಟಿ.ಸಿ; ಜಾಲಹಳ್ಳಿ, ಅಂಡ್ ಹೆಲಿಕಾಪ್ಟರ್ ಫ್ಲೈಟ್ ಟೆಸ್ಟ್ ಇಂಜಿನಿಯರ್, ಇದಲ್ಲದೆ ನಮ್ಮ ಪಿಡಬ್ಲ್ಯೂಡಿ ಇಲಾಖೆಯ ಫೈನಾನ್ಸ್ ಸೆಕ್ರೆಟರಿ ಸಹಿತ ಇದರಲ್ಲಿ ಭಾಗಿಯಾಗಿದ್ದರು. ಮಾನ್ಯ ಸದಸ್ಯರು ಹೇಳುತ್ತಿರುವುದು ಎಂದರೆ ಎಂಟು ಸದಸ್ಯರನ್ನು ತೆಗೆದುಕೊಂಡು ಹೋಗುವ ಒಂದು ಹೆಲಿಕ್ಯಾಪ್ಟರ್ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನೇರವಾಗಿ ಹೋಗುವುದಕ್ಕೆ 600 ಕಿ.ಮಿ.ವರೆಗೆ ಹೋಗುವ ಸಲುವಾಗಿ ಮಾಡಿದೆ. ಅವರೇನು ಹೇಳುತ್ತಿದ್ದಾರೆಂದರೆ ಏನೂ ಮಾಡದಿದ್ದರೆ ಸರ್ಕಾರ ನಿಷ್ಕ್ರೀಯವಾಗಿದೆ ಎನ್ನುತ್ತಾರೆ. ಏನಾದರೂ ಕೆಲಸ ಮಾಡಿದರೆ ಅದರಲ್ಲಿ ಕಮಿಷನ್ ತೆಗೆದುಕೊಂಡರು ಎನ್ನುವ ಭಾವನೆಯನ್ನು ವ್ಯಕ್ತಪಡಿಸುವುದಕ್ಕೆ ಹೊರಟಿದ್ದೇ ಆದರೆ ಇದು ಅಸಾಧುವಾದುದು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದನ್ನು ನ್ಯಾಯಸಮ್ಮತವಾಗಿ ಚರ್ಚೆ ಮಾಡಿ ಸಂಪುಟದಲ್ಲಿ ತೀರ್ಮಾನವಾದಮೇಲೆ ಇದರ ಬಗ್ಗೆ ಯೋಗ್ಯ ಸಲಹೆಯನ್ನು ಪಡೆದುಕೊಂಡು ಈ ಕಾರ್ಯಕ್ರಮವನ್ನು ಮಾಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಅವರು ಕೇಳಿದ್ದುದು ಇಷ್ಟೆ. ಟೆಂಡರನ್ನು ಕಾಲ್‌ಫಾರ್ ಮಾಡದೆ ನೇರವಾಗಿ ನೀವು ಎಂ.ಓ.ಯು.ಗೆ. ಏಕೆ ಸಹಿ ಮಾಡಿದಿರಿ? Because there are other companies also at competetive rates ನಿಮಗೆ ಗೊತ್ತಾಗಬೇಕಲ್ಲ. ನೀವು ನಾಲ್ಕೋ ಐದೋ ಕಂಪನಿಗಳಿಂದ ಪಡೆದು ಇದನ್ನು ಅಂತಿಮವಾಗಿ ಮಾಡಿದ್ದೇವೆ ಎಂದರೆ ಪರವಾಗಿಲ್ಲ. ನೇರವಾಗಿ ಒಂದೇ ಕಂಪನಿಗೆ ನಿಮಗೆ ಬೇಕಾದರೆ ಜೊತೆಯಲ್ಲಿ ಒಪಿನಿಯನ್ ತೆಗೆದುಕೊಂಡು ಅವರ ಜೊತೆಯಲ್ಲಿ ಮೆಮೊರ್ಯಾಡಂ ಆಫ್ ಅಂಡರ್‌ಸ್ಟಾಂಡಿಂಗ್‌ಗೆ ಸಹಿ ಮಾಡುವುದು ಏನಿತ್ತು?

ಶ್ರೀ ಸಿ.ಎಂ.ಉದಾಸಿ: ಬೇಕಾದವರ ಜೊತೆ ಚರ್ಚೆ ಮಾಡಿಲ್ಲ. ಇದಕ್ಕೆ ಅನುಭವವಿರುವ ತಜ್ಞರ ಸಮಿತಿಯನ್ನು ಹೆಚ್.ಎ.ಎಲ್. ಏರ್‌ಕಮಾಂಡರ್‌ನಿಂದ ತೆಗೆದುಕೊಂಡು ಮಾಡಿದ್ದೇವೆ.

ಅಧ್ಯಕ್ಷರು: ಮುಂದೆ ಬೇಡಿಕೆ ಬರುತ್ತದೆ. ಜಾಸ್ತಿ ಚರ್ಚೆ ಶೂನ್ಯವೇಳೆಯಲ್ಲಿ ಬೇಡ.

ಶ್ರೀ ವಾಟಾಳ್ ನಾಗರಾಜ್: ಈಗ ಇರುವ ಹೆಲಿಕಾಪ್ಟರನ್ನು ನೀವು ಏನು ಮಾಡುತ್ತೀರಿ?

ಶ್ರೀ ಸಿ.ಎಂ.ಉದಾಸಿ: ಅದನ್ನು ಇಟ್ಟುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಎರಡೂ ಇಟ್ಟುಕೊಳ್ಳುತ್ತೀರಾ?

ಶ್ರೀ ಸಿ.ಎಂ.ಉದಾಸಿ: ಈಗ ಇರುವ ಹೆಲಿಕ್ಯಾಪ್ಟರನ್ನೂ ಸಹಿತ ಇಟ್ಟುಕೊಳ್ಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ನಿಮಗೆ ಹೆಲಿಕಾಪ್ಟರ್ ಇರುವುದು ಆಗ ಇರುವುದಿಲ್ಲ. ಇಲ್ಲಿ ಪ್ರಶ್ನೆ ಎಂದರೆ ನೀವು ಟೆಂಡರನ್ನು ಕಾಲ್‌ಫಾರ್ ಮಾಡದೆ ಅಥವಾ ಬಿಡ್ಡನ್ನು ತೆಗೆದುಕೊಳ್ಳದೆ ನೇರವಾಗಿ ಒಂದು ಕಂಪನಿಗೆ ಅಗ್ರಿಮೆಂಟನ್ನು ಏಕೆ ಮಾಡಿದಿರಿ?

ಶ್ರೀ ಸಿ.ಎಂ.ಉದಾಸಿ: ನೇರವಾಗಿ ಒಂದು ಕಂಪನಿಗೆ ನಾವು ಅಗ್ರಿಮೆಂಟನ್ನು ಮಾಡಿಲ್ಲ.

ಅಧ್ಯಕ್ಷರು: ಈಗ ನಾನೇನು ಹೇಳುತ್ತೇನೆ ಎಂದರೆ the objection that you have raised is very valid. ಮಾನ್ಯ ವಿರೋಧ ಪಕ್ಷದ ಉಪನಾಯಕರು ಅದನ್ನು ಹೇಳಿದ್ದಾರೆ. The Hon'ble Minister has not met that point. Since we have taken up this during Zero Hour, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ಬೇರೆ ಯಾವುದಾದರೂ ರೂಪದಲ್ಲಿ ತೆಗೆದುಕೊಳ್ಳೋಣ. I will not avoid discussion on this.

ಈಗ ಬೇಡ.

ಶ್ರೀ ವಾಟಾಳ್ ನಾಗರಾಜ್: ಟೆಂಡರನ್ನು ಕರೆದಿದ್ದೀರೋ, ಇಲ್ಲವೇ? ಎರಡೇ ಪಾಯಿಂಟ್ ಟೆಂಡರ್ ಕರೆದಿದ್ದರೆ ಕರೆದಿದ್ದೇವೆ ಎಂದು ಹೇಳಿ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ. ಟೆಂಡರನ್ನು ಕರೆದಿದ್ದರೆ ಯಾರ್ಯಾರು ಬಂದಿದ್ದಾರೆ? ಯಾವ ಯಾವ ದೇಶದವರು ಬಂದಿದ್ದಾರೆ ಎಂದು ಹೇಳಿ. ಈಗೇನು ಬೇರೆ ಸಂದರ್ಭದಲ್ಲಿ ಚರ್ಚೆ ಮಾಡುವ ಅವಶ್ಯಕತೆ ಏನಿದೆ?

ಶ್ರೀ ಟಿ.ಬಿ.ಜಯಚಂದ್ರ: ನಾವು ಹೊಸ ಹೆಲಿಕ್ಯಾಪ್ಟರ್‌ನ್ನು ರಿಲೀಸ್ ಮಾಡುವಾಗ ಮಧ್ಯದಲ್ಲಿ ಚೇತಕ್‌ನ್ನು ಕೂಡ ಸ್ಪೇರ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಹೊಸದಾಗಿ ಒಂದು ಮಾಡಲ್ ರಿಲೀಸ್ ಮಾಡುವ ಸಂದರ್ಭದಲ್ಲಿ ಕೂಡ ಇಷ್ಟೊಂದು ಆತುರ ಏನಿತ್ತು? ಆಗುವುದಕ್ಕಿಂತ ಮುಂಚೆಯೇ ಒಂದು ಚೇತಕ್‌ನ್ನು ಸ್ಪೇರ್ ಮಾಡುತ್ತೇವೆ ಎಂದು ಹೇಳಿ ಮುಂದೆ ಬಂದಿದ್ದಾರೆ. ಅವರಿಗೊಂದು ಅವಕಾಶವನ್ನು ಕೂಡ ಕೊಟ್ಟಿಲ್ಲವಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಇಲ್ಲಿ ಹೆಚ್.ಎ.ಎಲ್.ನವರದು ಎಂದು ಏನು ಹೇಳುತ್ತಾರೆ. ಅದು ಇನ್ನೂ ಮಾರುಕಟ್ಟೆಗೆ ಬಂದಿಲ್ಲ. ಅದು proto-type ನಲ್ಲೇ ಇದೆ. ಸಿವಿಲ್ ವರ್ಕ್ಸ್ ಎಲ್ಲಾ ಮುಗಿಯಬೇಕಾದರೆ ಇನ್ನು ಒಂದೂವರೆ ವರ್ಷ, ಎರಡು ವರ್ಷವಾಗುತ್ತದೆ ಮಾರುಕಟ್ಟೆಗೆ ಬರಬೇಕಾದರೆ. ಇದರ ಬಗ್ಗೆಯೂ ಕೂಡ ಚರ್ಚೆ ಮಾಡಿದ್ದೇವೆ. ನಾವು ಇದನ್ನು 1979ರಲ್ಲಿ ತೆಗೆದುಕೊಂಡಿದ್ದಂಥದ್ದು ಇದು ಸಿಂಗಲ್ ಇಂಜಿನ್ ಇರುವುದು. ಮತ್ತೆ ಒಟ್ಟಿಗೆ 600 ಕಿಲೋಮೀಟರ್ ಅದಕ್ಕಿಂತ ಹೆಚ್ಚು ಹೋಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬೀದರ್ ಕಡೆಗೆ ಹೋಗಬೇಕಾದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು: ಅದು ಯಾವುದನ್ನು ಅವರು ಪ್ರಶ್ನೆ ಮಾಡುತ್ತಿಲ್ಲ. ಅವರು ಕೇಳುತ್ತಿರುವುದು ಟೆಂಡರ್ ಕಾಲ್‌ಫಾರ್ ಮಾಡಲಿಲ್ಲ. ಏಕಾಏಕಿ ಒಂದು ಕಂಪನಿ ಜೊತೆ ಎಂ.ಓ.ಯು ಮಾಡಿದ್ದೀರಿ. ಅದನ್ನು ಮಾತ್ರ ಅವರು ಕೇಳುತ್ತಿರುವುದು.

ಶ್ರೀ ಸಿದ್ಧರಾಮಯ್ಯ: ಒಂದು ಟೆಕ್ನಿಕಲ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಅವರು ರೆಕಮೆಂಡ್ ಮಾಡಿದರು ಯಾವುದನ್ನು ತೆಗೆದುಕೊಳ್ಳಬೇಕು ಎಂದು. ಅದರಲ್ಲಿ ವಿಂಗ್ ಕಮಾಂಡರ್ ಇದ್ದಾರೆ, ಇನ್ನು ಎಕ್‌ಸ್‌ಪರ್ಟ್ಸ್ ಇದ್ದಾರೆ. ಇದು ಬಹಳ ಒಳ್ಳೆಯದಾಗುತ್ತದೆ ಮತ್ತು ಎಂಟು ಜನರನ್ನು ತೆಗೆದುಕೊಂಡು ಹೋಗುವ ಹೆಲಿಕಾಪ್ಟರ್ ಆಗುತ್ತದೆ. ಬಹಳ ಉತ್ತಮವಾದ ಎರಡು ಇಂಜಿನ್ ಇರುವುದು ಇದೆ. ಕಂಪೇರೆಟೀವ್‌ಲಿ ಮೂರು ಕಂಪನಿಗಳಿಂದ ತರಿಸುವುದರಲ್ಲಿ ಇದು ಫ್ರೆಂಚ್ ಎನ್.3 ಬಹಳ ಉತ್ತಮವಾದುದು ಎಂದು ಹೇಳಿ ಆ ಎಕ್ಸ್‌ಪರ್ಟ್ ಕಮಿಟಿಯವರು ರೆಕಮೆಂಡ್

ಮಾಡಿದಮೇಲೆ ಕ್ಯಾಬಿನೆಟ್‌ನಲ್ಲಿ ಆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಏನೋ ಆಗಿಹೋಗಿದೆ ಎನ್ನುವುದು ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಟೆಂಡರನ್ನು ನೀವು ಕರೆಯಬಹುದಾಗಿತ್ತಲ್ಲ. ತಾಂತ್ರಿಕ ಸಮಿತಿ ನಿಮಗೆ ವರದಿ ಕೊಟ್ಟಮೇಲೆ ಟೆಂಡರನ್ನು ಏತಕ್ಕೆ ಕರೆಯಲಿಲ್ಲ?

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 22 ಕೋಟಿ ರೂಪಾಯಿ ಹೆಲಿಕ್ಯಾಪ್ಟರ್ ಬಗ್ಗೆ ಅಗ್ರಿಮೆಂಟನ್ನು ಮಾಡಿಕೊಂಡಿದ್ದೀರಿ without calling a global tender.

(ಗೊಂದಲ)

ಅಧ್ಯಕ್ಷರು: ಸನ್ಮಾನ್ಯ ಉಪಮುಖ್ಯಮಂತ್ರಿಗಳಿಗೆ ನಾನೇನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ಅವರು ವಿರೋಧ ಪಕ್ಷದ ನಾಯಕರಾದಿಯಾಗಿ ಎಲ್ಲಾ ಸ್ನೇಹಿತರು ಹೇಳತಕ್ಕಂಥದ್ದು ಒಂದೇ. ಗ್ಲೋಬಲ್ ಟೆಂಡರ್ ಕರೆಯಬೇಕಾಗಿತ್ತು. 22 ಕೋಟಿ ರೂಪಾಯಿ ವೆಚ್ಚ ಮಾಡುವಾಗ ಎಂದು. ಇದೇ ಹೆಲಿಕಾಪ್ಟರ್ ಕಡಿಮೆ ಬೆಲೆಗೆ ಸಿಗುತ್ತಿತ್ತೋ ಏನೋ? ಎಕ್ಸಾಸ್ಟ್ ಮಾಡದೆ ನೇರವಾಗಿ ಮಾಡಿದ್ದೀರಿ ಎನ್ನುವ ಮಾತನ್ನು ಹೇಳಿದ್ದಾರೆ. Probably ಇದು as is where is ನಾಳೆ ಪತ್ರಿಕೆಗಳಲ್ಲಿ ಬಂದರೆ ನಿಮಗೇ ಸ್ವಲ್ಪ ಅದರಿಂದ ತೊಂದರೆಯೂ ಆಗಬಹುದು. ಆದ್ದರಿಂದ in your own interest if you can, ನೋಡಿ. if you can satisfy them by giving a revised reply on behalf of the Government, in your own interest. Now they have levelled a charge against you that you have done it only on the strength of the advice given by the Expert Committee, you have not called for tenders. ಪ್ರಾಬಬಲಿ ನೀವು ಗ್ಲೋಬಲ್ ಟೆಂಡರ್‌ಗೆ ಹೋಗಿದ್ದರೆ, ಇದಕ್ಕಿಂತ ಕಡಿಮೆ ಬೆಲೆಗೆ ಸಿಗುತ್ತಿತ್ತು ಎಂದು ಅವರು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ: ಇದೇ ಎಕ್ಸ್‌ಪರ್ಟ್ ಕಮಿಟಿಯವರು ತೆಗೆದುಕೊಂಡು ಇಂಥದ್ದೇ ತೆಗೆದುಕೊಳ್ಳಬೇಕೆಂದು ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆವು. ನೀವು ಗ್ಲೋಬಲ್ ಟೆಂಡರ್ ಕರೆದು 10 ಕಂಪನಿಯವರಿಗೆ ಇನ್‌ವೈಟ್ ಮಾಡಿ, ಈ 10 ಕಂಪನಿಗಳ ಪೈಕಿ ಇದು ಕರೆಕ್ಟ್ ಇದೆ, ಇದರ ಬೆಲೆ ಇದು, ಇದರ ಬೆಲೆ ಇದು ಎಂದು ಹೇಳಿದರೆ, ಸರಿಯಿಲ್ಲ. ಅದರ ಬದಲು ಕ್ವಾಲಿಟಿ ಹೀಗಿದೆ, ಮೈನ್‌ಟೆನೆನ್ಸ್ ಹೀಗೆ ಮಾಡುತ್ತಾರೆ, ಸರ್ವೀಸ್ ಹೀಗೆ ಕೊಡುತ್ತದೆ ಎಂದು 10 ಕಂಪನಿಗಳಿಂದ ಗ್ಲೋಬಲ್ ಟೆಂಡರ್ ಕಾಲ್ಪರ್ ಮಾಡಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ನೇರವಾಗಿ ಒಂದೇ ಕಂಪನಿ

ಜೊತೆಯಲ್ಲಿ ನೀವು ವ್ಯವಹಾರ ಮಾಡಿ ಎಲ್ಲವೂ ಚೆನ್ನಾಗಿದೆ ಎಂದು ಹೇಳುತ್ತಿದ್ದೀರಿ, ಇದು ಸರಿಯಲ್ಲ.

ಶ್ರೀ ಸಿ.ಎಂ.ಉದಾಸಿ: ಸರ್ಕಾರ ಮೂರು ಹೆಲಿಕ್ಯಾಪ್ಟರ್ ಬಗ್ಗೆ ಐಡೆಂಟಿಫೈ ಮಾಡಿದ್ದು ಆ ಮೂರರಲ್ಲಿ ಐಡೆಂಟಿಫೈ ಮಾಡಿದ್ದರಲ್ಲಿ ಯಾವುದನ್ನು ತೆಗೆದುಕೊಳ್ಳಬೇಕೆಂದು ಎಕ್ಸ್‌ಪರ್ಟ್ ಕಮಿಟಿ ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್: ದೇಶದ ಎಲ್ಲಾ ಪತ್ರಿಕೆಗಳಿಗೆ, ಪ್ರಪಂಚ ಎಲ್ಲಾ ಪತ್ರಿಕೆಗಳಿಗೆ ನೀವು ಜಾಹಿರಾತು ಕೊಟ್ಟು ಕೇಳಬೇಕಾಗಿತ್ತು.

ಶ್ರೀ ಸಿ.ಎಂ.ಉದಾಸಿ: ಎಕ್ಸ್‌ಪರ್ಟ್ ಕಮಿಟಿ ತೀರ್ಮಾನ ಮಾಡಬೇಕೇ ಹೊರತು, ನಾವು ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ತಾಂತ್ರಿಕ ಸಮಿತಿ ಹೇಳಿದ್ದರೂ ನೀವು ಟೆಂಡರ್ ಕರೆಯಬೇಕಾಗಿತ್ತು,

ಶ್ರೀ ಟಿ.ಬಿ.ಜಯಚಂದ್ರ: ನಿಮ್ಮ ಸ್ಪೆಸಿಫಿಕೇಷನ್ ಪ್ರಕಾರ ನೀವು ಗ್ಲೋಬಲ್ ಟೆಂಡರ್ಸ್ ಕರೆಯಬೇಕಾಗಿತ್ತು, ಇಂಡಿಯಾದಲ್ಲಿ ಮ್ಯಾನ್ಯುಫ್ಯಾಕ್ಚರರ್ಸ್ ಹೆಚ್.ಎ.ಎಲ್ ಕಂಪನಿಯವರು ಬಿಟ್ಟರೆ ಫ್ರೆಂಚ್ ಮತ್ತು ಅಮೇರಿಕಾ ಇನ್ನು ಅನೇಕ ಕಂಪನಿಗಳಿವೆ. ಅಷ್ಟೂ ಗ್ಲೋಬಲ್ ಟೆಂಡರ್ಸ್‌ಗೆ ಹೋಗಬಹುದಾಗಿತ್ತು. ಸ್ಪೆಸಿಫಿಕೇಷನ್ ಪ್ರಕಾರ ನೀವು ಟೆಂಡರ್ ಕರೆದಿದ್ದರೆ ಹಾಗೆ ಬಂದ ಟೆಂಡರ್‌ಗಳನ್ನು ಆ ಮೇಲೆ ಟೆಕ್ನಿಕಲ್ ಕಮಿಟಿಗೆ ರೆಫರ್ ಮಾಡಿ ಅದರ ಮೇಲೆ ಅವರ ಸಲಹೆಗಳನ್ನು ತೆಗೆದುಕೊಂಡು ರೇಟ್ಸ್ ನಿಗದಿ ಮಾಡಿ ಮಾಡಿದ್ದರೆ ಅದನ್ನು ಒಪ್ಪಬಹುದಾಗಿತ್ತು. ನೀವು ಆ ಪ್ರಕ್ರಿಯೆ ಮಾಡಲಿಲ್ಲ. ನೇರವಾಗಿ ಅಮೇರಿಕಾದ್ದು ಎರಡು ನಿಮಗೆ ಸ್ಯೂಟಬಲ್ ಆಯಿತು ಎಂದು ಆರ್ಡರ್ ಕೊಟ್ಟರೆ ಅದು ಏನು ಅರ್ಥ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹೆಲಿಕ್ಯಾಪ್ಟರ್ ಒಳ್ಳೆಯದು ಕೆಟ್ಟದು ಎಂಬ ಬಗ್ಗೆ ಎಕ್ಸ್‌ಪರ್ಟ್ ಕಮಿಟಿಯವರು ಒಪಿನಿಯನ್ ಕೊಡುತ್ತಾರೆ, ರೇಟ್ಸ್ ಬಗ್ಗೆ ಎಲ್ಲರೂ ಕಾಂಪಿಟೀಟ್ ಮಾಡುವುದರಿಂದ ನೀವು ಟೆಂಡರ್ ಕಾಲ್ಪರ್ ಮಾಡಿಯೇ ತೆಗೆದುಕೊಳ್ಳಬೇಕಾಗುತ್ತದೆ. ನಿಮ್ಮ ಎಕ್ಸ್‌ಪರ್ಟ್ಸ್ ಇರತಕ್ಕಂಥವರು ಕ್ವಾಲಿಟಿ ನೋಡಿ ತೆಗೆದುಕೊಳ್ಳಬೇಕೇ ಹೊರತು ಪ್ರೈಸ್ ಮೇಲೆ ಅಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಭಾರತದಲ್ಲಿ ಚಾಲನೆಯಲ್ಲಿರತಕ್ಕಂತಹ ಹೆಲಿಕ್ಯಾಪ್ಟರ್ ಎರಡು ಕಂಪನಿಗಳು ಇರುತ್ತವೆ, ಅಮೇರಿಕಾ ಒಂದು ಫ್ರೆಂಚ್ ಒಂದು. ಇದು ಬೇರೆ ಯಾವುದೂ ಇರುವುದಿಲ್ಲ. ಒಂದು ಹೆಚ್.ಎ.ಎಲ್‌ನವರದ್ದು ಇನ್ನು ಮಾರುಕಟ್ಟೆಗೆ ಬಂದಿಲ್ಲ. ಅಮೇರಿಕಾ ಮತ್ತು ಫ್ರೆಂಚ್ ಎಲ್ ಮತ್ತು ಎನ್ 3,

ಎನ್ನತಕ್ಕಂತಹ ಎರಡು ಕಂಪನಿಗಳು ಇದಕ್ಕೆ ನಾವು ಗ್ಲೋಬಲ್ ಟೆಂಡರ್ ಕರೆದು ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ಸೀನಿಯರ್ ಪೈಲೆಟ್ ಯಾರು ಇದ್ದಾರೆ ಅವರು ಆ ಮೂರು ಕಂಪನಿಯಲ್ಲಿ ಯಾವುದು ತೆಗೆದುಕೊಳ್ಳಬಹುದು ಎಂದು ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನೀವು ಟೆಂಡರ್ ಕರೆದಿದ್ದರೆ ಏನಾಗುತ್ತಿತ್ತು, ಅಮೇರಿಕಾ ಮತ್ತು ಫ್ರೆಂಚ್ ಎರಡರದ್ದು ಬೇರೆ ಯಾವುದೂ ಇಲ್ಲವೆಂದು ಹೇಳುತ್ತೀರಿ, ನೀವು ಬೇರೆಯವರಿಗೆ ಮೊದಲು ಕರೆಯಬೇಕಾಗಿತ್ತು. ಏಕೆ ನೀವು ಕರೆಯಲಿಲ್ಲ, ನಿಮ್ಮ ತಾಂತ್ರಿಕ ಸಮಿತಿಯವರು ಏನು ಹೇಳಿದರು, ಟೆಂಡರ್ ಕರೆಯಬೇಡಿ ಎಂದು ಹೇಳಿದಿರಾ?

ಶ್ರೀ ಸಿದ್ದರಾಮಯ್ಯ: ಈ ಮೂರು ಕಂಪನಿಯಲ್ಲಿ ಚಾಲನೆಯಲ್ಲಿ ಇರತಕ್ಕಂಥದ್ದರಲ್ಲಿ ಯಾವುದನ್ನು ಮಾಡಬೇಕೆಂದು ಟೆಕ್ನಿಕಲ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿತು. ಆ ಟೆಕ್ನಿಕಲ್ ಕಮಿಟಿಯಲ್ಲಿ ನಮ್ಮ ಫೈನಾನ್ಸ್ ಸೆಕ್ರೆಟರಿ ಬಿಟ್ಟರೆ ಉಳಿದವರೆಲ್ಲರೂ ಹೊರಗಡೆಯವರು. ಏರ್ ಫೋರ್ಸ್‌ಗೆ ಸೇರಿದವರು ಇದ್ದಾರೆ. ನಮ್ಮ ಪೈಲೆಟ್ ಕೂಡ ಅದರಲ್ಲಿ ಇದ್ದಾರೆ. ಅವರು ಎನ್,3 ಫ್ರೆಂಚ್ ಅದು ಬಹಳ ಉತ್ತಮವಾಗಿದೆ ಎಂದು ಅವರು ರಿಪೋರ್ಟ್ ಕೊಟ್ಟ ಮೇಲೆ ಟೆಕ್ನಿಕಲ್ ಕಮಿಟಿ ಒಮ್ಮತದ ರಿಪೋರ್ಟ್ ಕೊಟ್ಟ ಮೇಲೆ ಅದರ ಆಧಾರದ ಮೇಲೆ ನಾವು ಫ್ರೆಂಚ್ ಕಂಪನಿ ಎನ್ 3 ತೆಗೆದುಕೊಳ್ಳುವುದಕ್ಕೆ...

ಅಧ್ಯಕ್ಷರು: ಎನ್ 3 ಹೆಲಿಕ್ಯಾಪ್ಟರ್ ಚೆನ್ನಾಗಿದೆ ಎಂಬ ಅಭಿಪ್ರಾಯವನ್ನು ಎಕ್ಸ್‌ಪರ್ಟ್ ಕಮಿಟಿಯವರು ಕೊಟ್ಟರು. ಆ ಎನ್ 3 ಹೆಲಿಕ್ಯಾಪ್ಟರ್ ಇದೇ ಬೆಲೆಗೆ ಸಿಗುತ್ತಿತ್ತಾ ಇನ್ನು ಕಡಿಮೆ ಬೆಲೆಗೆ ಸಿಗುತ್ತಿತ್ತಾ ಇದನ್ನು ಇತ್ಯರ್ಥ ಮಾಡಿದ್ದರೆ ಸರಿ ಹೋಗುತ್ತಿತ್ತು.

ಶ್ರೀ ಸಿದ್ಧರಾಮಯ್ಯ: ಇದನ್ನು ನೋಡಿ ಅಮೇರಿಕ ಮತ್ತು ಫ್ರೆಂಚ್ ಎರಡೂ ಕಂಪೇರ್ ಮಾಡಿ...

ಶ್ರೀ ಎಂ.ವೀರಪ್ಪ ಮೊಯಿಲಿ: ಸನ್ಮಾನ್ಯ ಅಧ್ಯಕ್ಷರೆ, ಇದು 20-22 ಕೋಟಿ ರೂಪಾಯಿಗೆ ಸಂಬಂಧಪಟ್ಟಿದ್ದು. ಇಂತಹ ಹೆಲಿಕ್ಯಾಪ್ಟರ್ ಬೇಕೇ ಅಥವಾ ಬೇಡವೇ ಎಂದು ಹೇಳತಕ್ಕದ್ದು ಅದು ಸರ್ಕಾರದ ನಿರ್ಣಯಕ್ಕೆ ಬಿಟ್ಟಿದ್ದು. ಒಮ್ಮೆ ನಿರ್ಣಯ ತೆಗೆದುಕೊಂಡ ಮೇಲೆ ಆ ಸ್ಪೆಸಿಫಿಕೇಷನ್ ಬೇಕು, ಮೊದಲು ಹೆಲಿಕ್ಯಾಪ್ಟರ್ ನಿರ್ಮಾಣ ಮಾಡತಕ್ಕಂತಹ ಸಂಸ್ಥೆ ಹೆಚ್.ಎ.ಎಲ್. ಅದು ಗವರ್ನಮೆಂಟ್ ಆಫ್ ಇಂಡಿಯಾ ಸಂಸ್ಥೆ. Have they written to the HAL, whether they can manufacture a helicopter of this specification? ಹೆಲಿಕ್ಯಾಪ್ಟರ್ ಸ್ಪೆಸಿಫಿಕೇಷನ್ ಯಾರು ಫಿಕ್ಸ್ ಮಾಡಬೇಕು, ಸರ್ಕಾರ ಮಾಡಲಿಕ್ಕೆ ಆಗುತ್ತದೆಯೇ?

ಅವರ ಹತ್ತಿರ ಎಕ್ಸ್‌ಪರ್ಟ್ಸ್ ಇರುವುದಿಲ್ಲ. ಇದಕ್ಕೆ ಕಮಿಟಿ ಮಾಡಲಿ, ಇಂತಹ ಸ್ಪೆಸಿಫಿಕೇಷನ್, ನಮಗೆ ಇಂಥ ಹೆಲಿಕ್ಯಾಪ್ಟರ್ ಬೇಕು ಎಂದು ಆ ಪ್ರೊಸೀಡಿಂಗ್ಸ್ ಸದನದ ಮುಂದೆ ಇಡಲಿ ಅದು ಆದ ಮೇಲೆ ಹೆಚ್‌ಎಎಲ್‌ಗೆ ಇವರು ಬರಬೇಕಾಗಿತ್ತು. They are the sole manufacturers as far as this country is concerned. ಅವರಿಂದ ನಿಮಗೆ ಮಾಡುವುದಕ್ಕಾಗುವುದಿಲ್ಲ ಎಂದು ಪತ್ರ ಬಂದಿದೆಯಾ? ಒಂದು ವೇಳೆ ಪತ್ರ ಬಂದಿದ್ದರೆ then you will have to moot the global tenders. ಅದು ಕೂಡ ಫ್ರಿ ಕ್ವಾಲಿಫೈ ಟೆಂಡರ್ ಕರೆಯಬೇಕಾಗಿತ್ತು. ಫ್ರಿ ಕ್ವಾಲಿಫೈ ಟೆಂಡರ್, ಗ್ಲೋಬಲ್ ಟೆಂಡರ್ ಕರೆಯದೆ ಏಕಾ ಏಕಿ ಯಾವುದೋ ಒಂದು ಕಂಪನಿಗೆ ಇದರ supremacy in the quality, competitve price, if there are three companies, give the calculations. ಪೈಲೆಟ್ ಮಾಡಲಿಕ್ಕೆ ಆಗುತ್ತದೆ. He is not an expert on manufacturing. What does a pilot know about this? He is not a person. The question is that Committee can scrutinise the tender. That Committee can scrutinise the preliminary specifications. ಪ್ರಿಲಿಮಿನರಿ ಸ್ಪೆಸಿಫಿಕೇಷನ್ ಬೇಕಾದರೆ ಮಾಡಬಹುದಾಗಿತ್ತು. ಆದರೆ ಇವತ್ತು ಗ್ಲೋಬಲ್ ಟೆಂಡರ್ ಇಲ್ಲದೆ ಅದೂ ಕೂಡ ಹೆಚ್‌ಎಎಲ್ ಸರ್ಟಿಫಿಕೇಟ್ ಕೊಡಬೇಕು. They may also supply. Some times, HAL themselves, the HAL has to give a certificate. Foreign exchange is also involved in this. ಆದ್ದರಿಂದ ಅಧ್ಯಕ್ಷರೆ ಇದು ಸರ್ವಥಾ ಸರಿಯಲ್ಲ. The most irregular deal. ಎಮ್‌ಒಯುವನ್ನು ತಾವು ಕ್ಯಾನ್ಸಲ್ ಮಾಡಬೇಕಾಗುತ್ತದೆ. ಅದು ಕ್ಯಾನ್ಸಲ್ ಮಾಡದೆ ಇದ್ದರೆ the most irregular purchase ever made in this State. Wher is the global tender? Where is the costing you have worked out? How it is quality-wise and price-wise competitive? ಎಲ್ಲಾ ಕಂಪನಿಯವರಿಗಿಂತ ಎಷ್ಟು ಮೇಲುಗಾರಿಕೆ ಆ ಕಂಪನಿಯವರಿಗೆ ಇದೆ, ಇದು ಯಾವುದೂ ಇಲ್ಲದೆ ನೇರವಾಗಿ ಕಮರ್ಷಿಯಲ್ ಸ್ಟ್ರೀಟ್‌ಗೆ ಹೋಗಿ ಪರ್ಚೇಸ್ ಮಾಡಿದ ಹಾಗೆ ತಾವು ಪರ್ಚೇಸ್ ಮಾಡಿದರೆ ಸರ್ಕಾರ ಇದನ್ನು ಪರ್ಚೇಸ್ ಮಾಡುವುದಕ್ಕಾಗುವುದಿಲ್ಲ. It is a most irregular deal. ನಾನು ಬೇರೆ ಹೇಳುವುದಕ್ಕೆ ತಯಾರಿಲ್ಲ. It smacks of something else, etc., I am not prepared to say at this stage. It is most irregular. You will have to cancel the MOU immediately. First you prescribe the specifications and then write to the HAL, let them write that they cannot manufacture or let

them say that they are not in a position to supply this kind of a Helicopter and when you exhaust all these means then you will have to call for global tenders stating what should be the specifications. Only then you have to call for global tenders by pre-qualifying the tenderers.

ಶ್ರೀ ಕೆ.ಎಸ್.ಈಶ್ವರಪ್ಪ: ಈ ಪಿಡಬ್ಲ್ಯೂಡಿ ಭಾಷೆಯಲ್ಲಿ ಹೇಳಬೇಕೆಂದರೆ ಇದು ಒಂದು ತರಹ ಪೀಸ್‌ವರ್ಕ್ ಕೆಲಸ ಎಂದು ಕಾಣುತ್ತಿದೆ. ಹೆಲಿಕ್ಯಾಪ್ಟರ್‌ಗೆ 20 ಕೋಟಿ ರೂಪಾಯಿಗೆ ಪೀಸ್‌ವರ್ಕ್ ಕೊಟ್ಟ ವ್ಯವಹಾರ. ಹೀಗಾಗಿ ಯಾರನ್ನಾದರೂ ಅನುಮಾನ ಪಡುವುದೇ ಇದರಲ್ಲಿ ಏನೂ ಅನುಮಾನ ಇಲ್ಲ. ಏಕೆಂದರೆ ಇಷ್ಟು ದೊಡ್ಡ ವ್ಯವಹಾರದಲ್ಲಿ ಗ್ಲೋಬಲ್ ಟೆಂಡರ್ ಕರೆಯದೇ ಇದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗುವುದೇ ತಪ್ಪು. ತಪ್ಪು ಆಗಿದೆ ಎಂದು ಸರ್ಕಾರ ಸ್ಪಷ್ಟವಾಗಿ ಒಪ್ಪಿಕೊಳ್ಳದೆ, ಇದರಲ್ಲಿ ಸರ್ಕಾರ ಖಂಡಿತವಾಗಿ ಪ್ರಿಸ್ಟಿಜ್ ತೆಗೆದುಕೊಳ್ಳಬಾರದು. ಇರುವ ವಿಚಾರವನ್ನು ಸ್ಪಷ್ಟವಾಗಿ ಹೇಳಿದರೆ ಆಗಿರುವ ತಪ್ಪನ್ನು ಹೇಳಿ ಇದರ ಮುಖಾಂತರ ಏನು ಸರಿ ಮಾಡಿಕೊಳ್ಳಬೇಕೆಂದು ಆ ದಿಕ್ಕಿನಲ್ಲಿ ಪ್ರಯತ್ನ ಮಾಡಿ.

MR.SPEAKER: The Deputy Chief Minister said, "I have heard all these remarks by the Hon'ble Leaders of Opposition. I will meet all these points. Give me some time. I will interact with the Officers and come back." I think he is fair.

ಶ್ರೀ ವಾಟಾಳ್ ನಾಗರಾಜ್: ಚರ್ಚೆ ಮಾಡುವುದು ಏನಿದೆ, ಟೆಂಡರ್ ಕರೆದಿದ್ದಾರಾ ಅಥವ ಇಲ್ಲವಾ ಎಂಬುದನ್ನೂ ತಿಳಿಸಿದರೆ ಸಾಕು.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಆದಿಯಾಗಿ ಹೇಳಿರತಕ್ಕಂತಹ ಎಲ್ಲರ ಮಾತುಗಳನ್ನು ನಾನು ಕೇಳಿದ್ದೇನೆ, ಆ ಎಲ್ಲಾ ವಿಷಯಗಳಿಗೂ ಕೂಡ ಸಮಂಜಸವಾಗಿ ಉತ್ತರ ಕೊಡುತ್ತೇನೆ, ಅದಕ್ಕೆ ಸ್ವಲ್ಪ ಸಮಯ ಬೇಕು, ಚರ್ಚೆ ಮಾಡಿಕೊಂಡು ಬಂದನಂತರ ಹೇಳುತ್ತೇನೆಂದು ಹೇಳಿದ್ದಾರೆ. ಸಮಯ ಕೊಡಬೇಕಾದ್ದು ಅಗತ್ಯ ಇದೆ ಕೊಡೋಣ.

ಶ್ರೀ ವಾಟಾಳ್ ನಾಗರಾಜ್: ತಮ್ಮ ಗಮನಕ್ಕೆ ತರುವುದು ಏನೆಂದರೆ, ಈ ತರಹ ಹೇಳಿರುವುದು ಅತ್ಯಂತ ಸೂಕ್ತವಾಗಿಲ್ಲ. ಎರಡು ವಿಚಾರ, ಟೆಂಡರ್ ತಾವು ಕರೆದಿದ್ದರಾ ಅಥವಾ ಇಲ್ಲವೇ ಇದಕ್ಕೆ ಕಾಲಾವಕಾಶ ಬೇಕೆ?

ಅಧ್ಯಕ್ಷರು: ಎಲ್ಲಾ ವಿಚಾರಗಳಿಗೂ ಉತ್ತರ ಹೇಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಪ್ಪು ಮಾಡಿದ್ದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಕಾಲಾವಕಾಶ ಬೇಕು.

ಶ್ರೀ ಸಿದ್ಧರಾಮಯ್ಯ: ಇಲ್ಲ, ಇದರಲ್ಲಿ ತಪ್ಪೂ ಇಲ್ಲ, ಮತ್ತೊಂದು ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ರೀತಿಯಲ್ಲಿ ನೀವು ತಪ್ಪು ಇಲ್ಲ, ಎಂಥದ್ದೂ ಇಲ್ಲವೆಂದು ಉತ್ತರ ಕೊಟ್ಟರೆ ಹೇಗೆ?

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಟೆಂಡರ್ ಬೇಕಾಗಿಲ್ಲ ಎನ್ನುವ ಹಾಗೆ ಹೇಳುತ್ತೀರಿ.

ಶ್ರೀ ಸಿದ್ಧರಾಮಯ್ಯ: ಏಕೆ ಟೆಂಡರ್ ಬೇಕಾಗಿಲ್ಲ ಎನ್ನುವ ಬಗ್ಗೆಯೂ ಹೇಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಟೆಂಡರ್ ಕರೆಯಬೇಕು.

ಶ್ರೀ ಸಿದ್ಧರಾಮಯ್ಯ: ಅದನ್ನು ನೀವು ಹೇಳುತ್ತೀರಿ, ನಾವೂ ಕೂಡ ಅದಕ್ಕೆ ಉತ್ತರ ಕೊಡಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್: ಏಕೆ ಟೆಂಡರ್ ಕರೆಯಬೇಕು, ನಮ್ಮಿಷ್ಟ ಬಂದ ಹಾಗೆ ಮಾಡಿಕೊಳ್ಳುತ್ತೇವೆ ಎನ್ನುವುದು ನಿಮ್ಮ ವಾದ ಇರಬಹುದು. ಆ ರೀತಿಯಲ್ಲಿಯೇ ನೀವು ಮಾಡಿಕೊಳ್ಳುವುದಾದರೆ ಹಾಗೆಯೇ ಮಾಡಿಕೊಳ್ಳಿ. ಅದು ಬೇರೆ ವಿಚಾರ. ತಾವು ಈ ರೀತಿಯಲ್ಲಿ ಉತ್ತರಕೊಟ್ಟರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ನನಗೆ ಶ್ರೀಮಾನ್ ಸಿದ್ಧರಾಮಯ್ಯನವರ ಸ್ವಭಾವದ ಪರಿಚಯ ಇದ್ದ ಕಾರಣವಾಗಿ ಅವರಿಗೆ ನಾನು ಮೆಲುದನಿಯಲ್ಲಿ ಹೇಳಿದೆ. ಅವರು ಈ ರೀತಿಯಲ್ಲಿ ಆಪಾದನೆಯನ್ನು ಮಾಡಿದ್ದಾರೆ, ನಿಮಗೆ ಮುಜುಗರವಾಗಬಹುದು ಎಂದು ಹೇಳಿದೆ. He has taken it up very seriously. He has expressed his intention to answer. ಅವರು ಹೇಳಿದ ಮೇಲೆ ತಾವು ಏನು ಹೇಳಬೇಕೋ ಹೇಳಿ. ಈಗ ಸಮಯ ಹೆಚ್ಚಾಗಿರುವುದರಿಂದ ಶೂನ್ಯ ವೇಳೆ ಚರ್ಚೆಯನ್ನು ನಾಳೆಗೆ ತೆಗೆದುಕೊಳ್ಳೋಣ. ಈಗ ರೆಗ್ಯುಲರ್ ಬಿಸಿನೆಸ್ ತೆಗೆದುಕೊಳ್ಳೋಣ.

ಶ್ರೀ ಕೆ.ಜಯರಾಮ್ ಶೆಟ್ಟಿ: ಮಾನ್ಯ ಅಧ್ಯಕ್ಷರೇ,

MR. SPEAKER: We will take up Zero Hour notices,

Tomorrow we will take it up. ಪ್ರತಿ ದಿವಸ ಮತ್ತೆ ಮತ್ತೆ ಕೈ ಎತ್ತುತ್ತಿದ್ದರೆ ಹೇಗೆ ಹೇಳಿ. ಈಗಾಗಲೇ ಕೆಲವರಿಗೆ ಅವಕಾಶವೇ ಸಿಕ್ಕಿಲ್ಲ.

ಶ್ರೀ ಕೆ.ಜಯರಾಮಶೆಟ್ಟಿ: ನಾವು ಕೇಳಿದ ಪ್ರಶ್ನೆಗಳೇ ಬರುವುದಿಲ್ಲ ಅಧ್ಯಕ್ಷರೇ,

ಅಧ್ಯಕ್ಷರು: ಹಾಗೆ ಮಾತನಾಡಬಾರದು, ನೀವು ಆ ರೀತಿ ಹೇಳುವುದಾದರೆ ನಾನು ಪ್ರೊಸೀಡಿಂಗ್ಸ್ ತರಿಸಿ ಯಾರ್ಯಾರಿಗೆ ಎಷ್ಟೆಷ್ಟು ಅವಕಾಶವನ್ನು ಕೊಟ್ಟಿದ್ದೇನೆ ಎಂಬುದನ್ನು ತೋರಿಸುತ್ತೇನೆ. ಈಗ ಯತ್ನಾಳ್‌ರವರು ಎದ್ದು ನಿಂತಿದ್ದಾರೆ. ಅವರಿಗೆ ಅವಕಾಶ ಕೊಡಬೇಕು, ಏಕೆಂದರೆ ಅವರು ಅಪರೂಪಕ್ಕೆ ಪ್ರಶ್ನೆಯನ್ನು ಕೇಳುತ್ತಾರೆ. ನಾನು ಎಲ್ಲರನ್ನೂ ಕವರ್ ಮಾಡಬೇಕಲ್ಲ. ನೀವು ಕೇಳುತ್ತೀರಿ ಎಂದು ಪ್ರತಿ ದಿವಸ ನಿಮಗೇ ಅವಕಾಶ ಕೊಡುವುದಕ್ಕಾಗುತ್ತದೆಯೇ? ಸಭಾಪತಿಯವರೇ ನಿಮ್ಮ ವಿಷಯದ ಬಗ್ಗೆ ಟಿಕ್ ಮಾಡಿಕೊಂಡಿದ್ದೇನೆ. ಕೇವಲ ಒಂದೊಂದು ನಿಮಿಷದಲ್ಲಿ ವಿಷಯವನ್ನು ಹೇಳಿ ಮುಗಿಸಬೇಕು. ಏಕೆಂದರೆ ಈ ವಿಷಯಕ್ಕೆ ಹೆಚ್ಚು ಸಮಯ ತೆಗೆದುಕೊಂಡ ಕಾರಣ ಅದು ಈಗ ಕವರ್ ಆಗಬೇಕು.

ಡಾ॥ ಬಿ.ಶಂಕರ್‌ನಾಯಕ್: ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ರೂಲ್ 69ರಡಿಯಲ್ಲಿ ಸಾಕಷ್ಟು ಜನರು ಪಾಲ್ಗೊಂಡು ಸದನದಲ್ಲಿ ಮಾತನಾಡಿದ್ದಾರೆ. ತಾವು ನನಗೆ ಅನುಮತಿಯನ್ನು ಕೊಟ್ಟರೆ ಒಂದು ಸ್ಟೇಟ್‌ಮೆಂಟ್‌ನ್ನು ಮಾಡಬೇಕಾಗಿದೆ.

ಅಧ್ಯಕ್ಷರು: ಅವಕಾಶವನ್ನು ಕೊಡುತ್ತೇನೆ. ಏಕೆಂದರೆ ಆ ಸದಸ್ಯರುಗಳೆಲ್ಲರೂ ಉತ್ತರಕ್ಕಾಗಿ ಕಾಯುತ್ತಿದ್ದಾರೆ, ಉತ್ತರ ಕೊಡಬೇಕಾದ ಅಗತ್ಯವೂ ಕೂಡ ಇದೆಯಾದ್ದರಿಂದ ನಾನು ನಿಮಗೆ ಶೂನ್ಯ ವೇಳೆಯ ನಂತರ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ನಮಗೆ ಆ ಸ್ಟೇಟ್‌ಮೆಂಟ್ ನಕಲು ಬೇಕು.

ಡಾ. ಬಿ.ಶಂಕರ್ ನಾಯಕ್: ಕಾಪಿ ಅಗತ್ಯತೆ ಇಲ್ಲವೆಂದು ನನಗನ್ನಿಸುತ್ತದೆ.

ಅಧ್ಯಕ್ಷರು: ಓರಲ್ ಸ್ಟೇಟ್‌ಮೆಂಟ್ ಕೊಡುತ್ತೀರಾ?

ಶ್ರೀ ಕೆ.ಎಸ್.ಈಶ್ವರಪ್ಪ: ಅಧ್ಯಕ್ಷರೇ, ನಮಗೆ ಕಾಪಿ ಬೇಕು. ಏಕೆಂದರೆ ಆ ಸ್ಟೇಟ್‌ಮೆಂಟ್ ಮೇಲೆ ನಾವು ಚರ್ಚೆ ಮಾಡಬೇಕಾಗುತ್ತದೆ. ನಮ್ಮ ಹತ್ತಿರ ಕೂಡ ಡಾಕ್ಯುಮೆಂಟ್‌ಗಳಿವೆ. ಆದರೆ ಈಗ ಅವರು ಏನು ಸ್ಟೇಟ್‌ಮೆಂಟ್ ಕೊಡುತ್ತಾರೆ ಅದರ ಕಾಪಿ ನೋಡಿಕೊಂಡು ನಾವು ಮುಂದೆ ಚರ್ಚೆ ಮಾಡಬೇಕಾದ ಕಾರಣವಿದೆ. ಆದಕಾರಣ ಅವರು ಸೋಮವಾರ ಬೇಕಾದರೆ ರಿಪ್ಲೈ ಕೊಡಲಿ.

ಅಧ್ಯಕ್ಷರು: ಹಾಗಾದರೆ ಮಂತ್ರಿಗಳು ಸೋಮವಾರವೇ ರಿಪ್ಲೈ ಕೊಡಲಿ. ಈಗ ಶೂನ್ಯ ವೇಳೆಯಡಿಯಲ್ಲಿ ಮಂಜುನಾಥ್ ಸಿ.ಕುನ್ನೂರ್‌ರವರು ಮಾತನಾಡಲಿ.